ದಿನಾಂಕ 20-02-2026 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**<u>ಪಾಟೀ ಸವಾಲು :</u>** ಪ್ರತಿವಾದಿಗಳ ಪರ ಶ್ರೀಮತಿ ಆರ್ ಎಮ್ ಸಿ ವಕೀಲರಿಂದ.

ದಾವಾ ಆಸ್ತಿಯ ಪಕ್ಕದಲ್ಲಿರುವ ಆಸ್ತಿ ನಂಬರ 149 ರ ತಟ್ಟಿಗೋಡೆಗೆ ಕಿಟಕಿ ಇವೆಯೇ ಎಂದರೆ ಸಾಕ್ಷಿ ತಟ್ಟಿಗೋಡೆ ನಮ್ಮದು ಆದರೆ ಅದಕ್ಕೆ ಕಿಟಕಿ ಇಲ್ಲ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ಹೊಸ ಮನೆ ಕಟ್ಟಿದ್ದು ಅದನ್ನು ಈ-ಸ್ವತ್ತು ಮಾಡಿಕೊಂಡು ಕಟ್ಟಿರುತ್ತೀರಿ ಎಂದರೆ ಸರಿ. ಈ-ಸ್ವತ್ತನ್ನು ಸದರಿ ಸ್ವತ್ತಿನ ಚಕ್ಕು ಬಂದಿಯನ್ನು ಗುರ್ತಿಸಿದ ನಂತರ ನೀಡಿರುತ್ತಾರೆ ಸರಿ. ಸಾಕ್ಷಿಗೆ ನಿಪಿ 7 ಅನ್ನು ತೋರಿಸಿ ಅದರಲ್ಲಿ ತಟ್ಟಿಗೋಡೆ ಎಲ್ಲಿ ಇದೆ ಎಂದರೆ ಸಾಕ್ಷಿ ಹಸಿರು ಬಣ್ಣದ ಮನೆಯ ಪಕ್ಕದಲ್ಲಿ ಎರಡು ಅಡಿ ನಂತರ ಇದೆ ಎನ್ನುತ್ತಾರೆ. ನೀವು ಮನೆ ಕಟ್ಟುವಾಗ ಪ್ರತಿವಾದಿಯರು ತಕರಾರು ತೆಗೆದಿದ್ದರು ಎಂದರೆ ಸರಿ. ಪ್ರತಿವಾದಿಯರು ಈ-ಸ್ವತ್ತು ಪಡೆಯಬಾರದೆಂದು ಮತ್ತು ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿರುತ್ತೀರಿ ಎಂದರೆ ಸರಿಯಲ್ಲ. ತಟ್ಟಿಗೋಡೆ ಇರುವ ಜಾಗ ನಕಾಶೆ ಆಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ತಮ್ಮ ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡುತ್ತಾರೆ ಎಂದು ಅವರ ವಿರುದ್ಧ ಸುಳ್ಳು ದಾವೆಯನ್ನು ಹೂಡಿದ್ದೀರಿ ಎಂದರೆ ಸಾಕ್ಷಿ ಅವರು ನಮ್ಮ ಜಾಗವನ್ನು ಸೇರಿಸಿ ಮಾರಾಟ ಮಾಡುತ್ತಾರೆ ಎಂದು ಈ ದಾವೆಯನ್ನು ಹೂಡಿದ್ದೇವೆ ಎನ್ನುತ್ತಾರೆ.

**ಮರು ವಿಚಾರಣೆ ಇಲ್ಲ**

O.S.111/2022 Cross of PW 1

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.